## ಮೈಸೂರು ಡಿಸ್ಟ್ರಿಕ್ಟ್.

### ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರು 466.

ಅರ್ಜೆದಾರೆ ಹಯಾತ್‌ಸಾಬಿಯು ಯಡತೊರೇ ತಾಲ್ಲೂಕು ಮಿರ್ಲೆ ಸ್ಥಳದ ಮೈನರಾದ ಜಮಾಲ್‌ಖಾನನ ಮಗ ಮೈರ್ದಖಾನನ ಆಸ್ತಿ ವಿಷಯದಲ್ಲಿ.

ಸದರೀ ಮೈನರಾದ ಮೈರ್ದಖಾನನಿಗೆ ಸೋದರಮಾವ ಆಗಬೇಕೆಂಬ ಪಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಹಯಾತ್‌ಸಾಬಿಯು ಸದರೀ ಮೈನರನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬ್ಯೆ ಅರ್ಜೀ ಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬ್ಯೆ 1885ನೇ ಇಸವಿ ಅಕ್ಟೋಬರ್ ತಾರೀಖು 6ರಲ್ಲಿ ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1885ನೇ ಇಸವಿ ಸೆಪ್ಟಂಬರ್ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎ. ನರಸಿಂಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

---

## ಸ್ರ್ 1885ನೇ ಇಸವಿ ಆಗಸ್ಟ್ ತಿಂಗಳ ಕಾಲಸಿತ್ಥಿ ರಿಪೋರ್ಟುಗಳು.

### ಮೈಸೂರು ಡಿಸ್ಟ್ರಿಕ್ಟ್.

ಮಳೆ—ತಾಲ್ಲೂಕುಗಳಲ್ಲಿ ಬಿದ್ದ ಮಳೆ ಈ ಕೆಳಗೆ ಕಂಡಂತೆ ರಿಜಿಸ್ಟರಾಗಿರುತ್ತೆ:—

| | | ಇಂ. | ಸೆಂ. | | | ಇಂ. | ಸೆಂ. |
|---|---|---|---|---|---|---|---|
| ಮೈಸೂರು | .. | 0 | 77½ | ನಂಜನಗೂಡು | .. | 0 | 20 |
| ಚಾಮರಾಜನಗರ | .. | 0 | 0 | ತಿರುಮಕೂಡ್ಲು ನರಸೀಪುರ | .. | 2 | 65 |
| ಶ್ರೀರಂಗಪಟ್ಟಣ | .. | 0 | 30 | ಮಂಡ್ಯ | .. | 0 | 30 |
| ಹುಣಸೂರು | .. | 1 | 79 | ಹೊಳೇನರಸೀಪುರ | .. | 1 | 0 |
| ಯಡತೊರೆ | .. | 0 | 64 | ಅತ್ತಿಕುಪ್ಪ | .. | 0 | 41 |
| ಹೆಗ್ಗಡದೇವನಕೋಟೆ | .. | 0 | 95 | ಚನ್ನರಾಯಪಟ್ಟಣ | .. | 0 | 15 |
| ಗುಂಡ್ಲುಪೇಟೆ | .. | 0 | 40 | ನಾಗಮಂಗಲ | .. | 0 | 87 |

ಫಸಲ್.—ಸಾಧಾರಣವಾಗಿ ಬೆಳೆಯಲ್ಲಿರುವ ಫಸಲ್‌ಗಳು ಮಳೆ ಇಲ್ಲದೆ ಒಣಗುತ್ತಲಿವೆ. ಭತ್ತಾ, ರಾಗಿ, ಉದ್ದು, ಹುರಳಿ, ಹರಳು ಇವು ಕೆಲವು ತಾಲ್ಲೂಕುಗಳಲ್ಲಿ ಪೇರಾವಾಗಿವೆ. ಜೋಳ, ರಾಗಿ, ಯಳ್ಳು, ಕೊತ್ತುಂಬರಿಬೀಜ, ಹೆಸರು, ಉದ್ದು, ಇವು ಪ್ರಾಯಶಃ ಯಲ್ಲಾ ತಾಲ್ಲೂಕುಗಳಲ್ಲಿಯೂ ಕಟಾವಾಗಿರುತ್ತೆ.

ಜನಾರೋಗ್ಯ.—ಮೈಸೂರು, ಚಾಮರಾಜನಗರ, ನಂಜನಗೂಡು, ಯಳಂದೂರು ಈ ತಾಲ್ಲೂಕುಗಳ ಕೆಲವು ಪ್ರಾಂತ್ಯದಲ್ಲಿ ಉಬಾಲ್‌ಜುಲಾಬ್ ವ್ಯಾಪಿಸಿರುವದು ಹೊರ್ತು ಅನ್ಯತ್ರ ಜನಾರೋಗ್ಯ ಸಾಧಾರಣವಾಗಿ ಚನ್ನಾಗಿ ಇದೆ.

ಕಾಳ್ನಡೆ—ಕಾಳ್ನಡೆಗಳಲ್ಲಿ ಯಲ್ಲಾ ಕಾರಣಗಳಿಂದ ಹೋದವುಗಳ ಸಂಖೆ, ಈ ತಿಂಗಳಲ್ಲಿ 2,211, ಹಿಂದಿನ ತಿಂಗಳಲ್ಲಿ 2,452.

ಧಾರಣೆ—ಬಹುಶಃ ಏಕರೀತಿಯಾಗಿದೆ; ರೂಪಾಯಿ 1ಕ್ಕೆ ಅವಲ್ ತರಹಾ ಅಕ್ಕಿ 10 ಕೇರು, ರಾಗಿ 24 ಕೇರು, ಹುರಳಿ 19 ಕೇರು.

ಅಬ್ದುಲ್‌ಖಾದರ್ ಕೆ. ಬಿ.
ಡೆಪ್ಯುಟಿ ಕಮ್ಮಿಷನರ್.